## ಕೀಚಕ...

ದೊಡ್ಡ ಮಗಳಿಗೆ ಶಾಲೆಗೆ ಸೇರಿಸಲು ಸಂದರ್ಶನಕ್ಕೆ ಹೋಗಿದ್ದೆವು. ಚಿಕ್ಕ ಮಗಳನ್ನೂ ಜೊತೆಗೆ ಕರೆದುಕೊಂಡೇ ಹೋಗಬೇಕಾಯ್ತು. ಪ್ರಿನ್ಸಿಪಾಲ್ ಮೇಡಮ್ ದೊಡ್ಡ ಮಗಳನ್ನು ಮಾತಾಡಿಸುವಷ್ಟು ಹೊತ್ತು ಚಿಕ್ಕ ಮಗಳು ಅಲ್ಲಿನ ವಸ್ತುಗಳನ್ನೆಲ್ಲಾ ಎಳೆದಾಡಿ ಗಲಾಟೆ ಮಾಡುತ್ತಿದ್ದಳು. ಸಂದರ್ಶನ ಮುಗಿದ ಮೇಲೆ ಅವರು ತಂಟೆ ಮಾಡುತ್ತಿದ್ದ ಚಿಕ್ಕಮಗಳ ಕೈ ಹಿಡಿದು, 'ತುಂಬಾ ತಂಟೆ ಮಾಡ್ತೀಯ... ಏನು ನಿನ್ನ ಹೆಸರು?' ಎಂದರು. ಅವಳು, 'ಕೀಚಕಾ' ಎಂದಳು. ಮೇಡಮ್‌ಗೆ ಅವಳ ಹೆಸರು ಕೇಳಿ ಗಾಬರಿಯಾಯಿತೇನೊ ಅವರು ನಮ್ಮ ಮುಖ ನೋಡಿದರು. ನಾನು, 'ಶೀರ್ಷಿಕಾ' ಎಂದು ಹೇಳಿದ ಮೇಲೆ ನಗುತ್ತ ಸುಮ್ಮನಾದರು.

**ಪೂರ್ಣಿಮಾ ಆಗುಂಬೆ**





## ಇನ್‌ಫೆಕ್ಷನ್

ಬಾಲ್ಯದ ಸ್ನೇಹಿತ ಕಾರ್ತಿಕ್ ಬ್ಯಾಂಕ್ ಉದ್ಯೋಗಿ. ಅವನನ್ನು ಬೆಳೆಸಿದ್ದು ಅವನ ಅಜ್ಜಿಯೇ. ಅವರಿಗೆ ಅವನೆಂದರೆ ತುಂಬಾ ಪ್ರೀತಿ, ಅಷ್ಟೇ ಹೆಮ್ಮೆ. ಬಾಲ್ಯದಲ್ಲಿ ತಾಯಿಯನ್ನು ಕಳೆದುಕೊಂಡ ಅವನಿಗೆ ಅವನ ಅಜ್ಜಿಯೇ ಸರ್ವಸ್ವ.

ಆ ದಿನ ನಾನು ಅವನ ಮನೆಗೆ ಹೋದೆ. ಆತ ಮನೆಯಲ್ಲಿರಲಿಲ್ಲ. ಅಜ್ಜಿಯನ್ನು ಕೇಳಿದೆ. ಅಜ್ಜಿ, 'ಇನ್‌ಫೆಕ್ಷನ್ ಇದೆ ಅಂತ ಬ್ಯಾಂಕ್‌ಗೆ ಹೋಗಿದ್ದಾನಪ್ಪ' ಎಂದರು. ಒಂದೈದು ನಿಮಿಷ ನಾನು ತಬ್ಬಿಬ್ಬಾಗಿ ನಿಂತೆ. ಯಾವ ಇನ್‌ಫೆಕ್ಷನ್ ಆಯ್ತು, ಬ್ಯಾಂಕ್‌ಗೆ ಯಾಕೆ ಹೋದ... ಎಂದೆಲ್ಲಾ ಯೋಚಿಸಿದೆ. ನಂತರ ಅರಿವಾಯಿತು, 'ಇನ್‌ಸ್ಪೆಕ್ಷನ್' ಅಜ್ಜಿಯ ಬಾಯಿಯಲ್ಲಿ 'ಇನ್‌ಫೆಕ್ಷನ್' ಆಗಿದೆ ಎಂದು.

**ಕೆ.ವಿ. ಸೀತಾರಾಮ್**

ಕಲೆ: ಗಣೇಶ ಆಚಾರ್ಯ